**SRI DEVARAJ URS ACADEMY OF HIGHER EDUCATION & RESEARCH**

**SRI DEVARAJ URS MEDICAL COLLEGE**

**Tamaka, Kolar**

**UNIVERSITY LIBRARY & LEARNING RESOURCE CENTRE**

**Online Newspaper Clipping Service**

**Dtd-Sunday, 28th, May 2023**

**Page No.03**

ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರದ ಮಾರ್ಗದರ್ಶಕ ಎನ್‌.ಕುಮಾರ್ ಅಭಿಪ್ರಾಯ

# ಶೇ 12ರಷ್ಟು ಮಂದಿಗೆ ಮಾನಸಿಕ ರೋಗ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಮಾನಸಿಕ ಆರೋಗ್ಯ ಅರಿವು ಕಾರ್ಯಾಗಾರ
- ಅಧಿಕಾರಿ ವರ್ಗದ ಮೇಲೆ ದೊಡ್ಡ ಜವಾಬ್ದಾರಿ
- ನಿಯಮಿತವಾಗಿ ಅರಿವು ಮೂಡಿಸಲು ಸೂಚನೆ

**ಕೋಲಾರ:** 'ದೈಹಿಕ ಆರೋಗ್ಯಕ್ಕೆ ನೀಡುವ ಪ್ರಾಮುಖ್ಯವನ್ನು ಸಮಾಜ ಮಾನಸಿಕ ಆರೋಗ್ಯಕ್ಕೆ ನೀಡುತ್ತಿಲ್ಲ. ದೇಶದಲ್ಲಿ ಶೇ 10ರಿಂದ 12ರಷ್ಟು ಮಂದಿ ಮಾನಸಿಕ ರೋಗಗಳಿಂದ ಬಳಲುತ್ತಿದ್ದಾರೆ. ಶೇ 1ರಷ್ಟು ಜನರಲ್ಲಿ ತೀವ್ರತರ ಸಮಸ್ಯೆ ಇದೆ. ಶೇ 3ರಷ್ಟು ಮಂದಿ ಆಸ್ಪತ್ರೆಯಲ್ಲಿದ್ದು, ಶೇ 97 ಮಂದಿ ಹೊರಗಿದ್ದಾರೆ. ಇಂಥವರಿಗೆ ಅರಿವು ಮೂಡಿಸಬೇಕಿದೆ' ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ, ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರದ ಮಾರ್ಗದರ್ಶಕ ಎನ್. ಕುಮಾರ್ ತಿಳಿಸಿದರು.

ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಆರೋಗ್ಯ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಜಿಲ್ಲಾ ನ್ಯಾಯಾಂಗ ಇಲಾಖೆ ಆಶ್ರಯದಲ್ಲಿ ದೇವರಾಜ ಅರಸು ವೈದ್ಯಕೀಯ ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಮಾನಸಿಕ ಆರೋಗ್ಯದ ಅರಿವು ಕಾರ್ಯಾಗಾರ' ಉದ್ಘಾಟಿಸಿ ಮಾತನಾಡಿದರು.

'ಮನುಷ್ಯ ತನ್ನ ಭಾವನೆ, ಆಲೋಚನೆ ಹಾಗೂ ವರ್ತನೆಗಳಲ್ಲಿ ವ್ಯತ್ಯಾಸವಾದಾಗ ಅದನ್ನು ವ್ಯಕ್ತಪಡಿಸಲು ಹಿಂಜರಿಯುತ್ತಾನೆ. ಸಮಾಜ ತನ್ನನ್ನು ಕೀಳಾಗಿ ಹಾಗೂ ತಾರತಮ್ಯದಿಂದ ನೋಡಬಹುದು ಎಂಬ ಕಾರಣಕ್ಕೆ ಮಾನಸಿಕ ಸಮಸ್ಯೆಯನ್ನು ಯಾರೊಂದಿಗೂ ಹೇಳಿಕೊಳ್ಳುವುದಿಲ್ಲ. ಉಲ್ಬಣಗೊಂಡಾಗ ಮನೆಯವರು ಭೂತ ಪ್ರೇತ ಅಥವಾ ದೆವ್ವದ ಕಾಟವೆಂದು ಅಥವಾ ಮಾಟ ಮಂತ್ರದ ಪ್ರಯೋಗವಿರಬಹುದೆಂದು ತಿಳಿಯುತ್ತಾರೆ' ಎಂದರು.

'ದೈಹಿಕ ರೋಗ ಬಂದರೆ ಚಿಕಿತ್ಸೆ ಕೊಡಿಸುತ್ತಾರೆ. ಚಿಕಿತ್ಸೆಗೆ ದುಡ್ಡು ಖರ್ಚಾಗುತ್ತದೆ, ಬೇರೆ ಯಾರಿಗೂ ಇದರಿಂದ ತೊಂದರೆ ಆಗಲ್ಲ. ಆದರೆ, ಮಾನಸಿಕ ರೋಗಿಗೆ ಸರಿಯಾದ ಚಿಕಿತ್ಸೆ ಸಿಗದಿದ್ದರೆ ಇಡೀ ಕುಟುಂಬ ಮಾನಸಿಕ ರೋಗದಿಂದ ಬಳಲಬೇಕಾಗುತ್ತದೆ. ಹೀಗಾಗಿ, ವಿದ್ಯಾವಂತರು, ಅಧಿಕಾರಿ ವರ್ಗದ ಮೇಲೆ ದೊಡ್ಡ ಜವಾಬ್ದಾರಿ ಇದೆ' ಎಂದು ಹೇಳಿದರು.

'ಮಾನಸಿಕ ರೋಗಿಗಳಿಗೆ ಕೈಗೆಟುಕುವ ದರದಲ್ಲಿ ಚಿಕಿತ್ಸೆ ಕೊಡಬೇಕು. ಗೌರವ ಕೊಡಬೇಕು. ತಾರತಮ್ಯ ಮಾಡುವಂತಿಲ್ಲ. ದೈಹಿಕ ರೋಗಿಗಳಿಗೆ ನೀಡುವ ಎಲ್ಲಾ ಅನುಕೂಲಗಳನ್ನು ಕಲ್ಪಿಸಬೇಕು' ಎಂದು ಕಿವಿಮಾತು ಹೇಳಿದರು.

'ಪೊಲೀಸ್ ಜವಾಬ್ದಾರಿ ಹೆಚ್ಚಿದೆ. ಆರೋಗ್ಯ ಇಲಾಖೆ, ಕಾನೂನು ಇಲಾಖೆ, ಪೊಲೀಸ್ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ ಒಟ್ಟಿಗೆ ಕೆಲಸ ಮಾಡಬೇಕು. ಮಾನಸಿಕ ಆರೋಗ್ಯ ಸಂಬಂಧ ಅರಿವು ಕಾರ್ಯಾಗಾರಗಳನ್ನು ನಿಯಮಿತವಾಗಿ ಆಯೋಜಿಸಬೇಕು' ಎಂದು ತಿಳಿಸಿದರು.

'ಮಾನಸಿಕ ಆರೋಗ್ಯದಲ್ಲಿ ಕರ್ನಾಟಕ ದೇಶದಲ್ಲಿ ನಂಬರ್ ಒನ್ ಸ್ಥಾನದಲ್ಲಿದೆ. ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದರಿಂದ ಸಮಾಜ ಹಾಗೂ ದೇಶಕ್ಕೆ ಒಳ್ಳೆಯದು' ಎಂದು ಸಲಹೆ ನೀಡಿದರು.

ಜಿಲ್ಲಾ ಪಂಚಾಯಿತಿ ಸಿಇಒ ಯುಕೇಶ್ ಕುಮಾರ್ ಮಾತನಾಡಿ, 'ಜೀವನ ಜಟಿಲವಾಗುತ್ತಿದೆ. ಎಲ್ಲಾ ಇದ್ದರೂ ನೆಮ್ಮದಿ ಇಲ್ಲವಾಗಿದೆ. ಸರ್ಕಾರಿ ನೌಕರರು ಜನರಿಗೆ ಹತ್ತಿರವಾಗಿರುತ್ತಾರೆ. ಅವರಿಗೆ ಸವಾಲು ಇದ್ದೇ ಇರುತ್ತದೆ. ಜನರ ನಿರೀಕ್ಷೆಯು ಹೆಚ್ಚಿದೆ. ಅಧಿಕಾರಿಗಳಿಗೆ ಒತ್ತಡ, ಕೌಟುಂಬಿಕ ಸಮಸ್ಯೆಗಳಿವೆ. ಹಿರಿಯ ಅಧಿಕಾರಿ, ಸಿಬ್ಬಂದಿಗೆ ಕಾರ್ಯಾಗಾರ ನಡೆಸಲಾಗುವುದು' ಎಂದರು.

ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶ ಶುಕ್ಲಾಕ್ಷ ಪಾಲನ್, 'ನಮಗೆ ದೈಹಿಕ ಆರೋಗ್ಯವಷ್ಟೇ ಸಾಲದು; ಮಾನಸಿಕ ಆರೋಗ್ಯ ತುಂಬಾ ಅಗತ್ಯ. ಶೇ 100 ಮಾನಸಿಕ ಆರೋಗ್ಯವಂತ ವ್ಯಕ್ತಿ ಸಿಗುವುದು ಕಷ್ಟ. ಮಾನಸಿಕ ಅನಾರೋಗ್ಯ ಇದ್ದವರು ತಮ್ಮ ಸಮಸ್ಯೆ ಹೇಳಿಕೊಳ್ಳುವುದಿಲ್ಲ' ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಯಶಂಕರ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸುನಿಲ ಹೊಸಮನಿ, ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರದ ಉಪನಿರ್ದೇಶಕಿ ಡಾ.ಪಿ.ರಜನಿ, ವಕೀಲ ಎಂ.ಎನ್.ಉಮಾಶಂಕರ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಜಗದೀಶ್, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ವಿಜಯಕುಮಾರ್, ಜಿಲ್ಲಾ ಮಾನಸಿಕ ಕಾರ್ಯಕ್ರಮ ಅನುಷ್ಠಾನ ಅಧಿಕಾರಿ ಡಾ.ಎನ್.ಸಿ.ನಾರಾಯಣಸ್ವಾಮಿ, ಪ್ರಾಂಶುಪಾಲ ಡಾ.ಕೆ.ಪ್ರಭಾಕರ್, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಡಾ.ಪಿ.ಎಸ್.ಸತ್ಯನಾರಾಯಣ ರಾವ್, ವಕೀಲರು, ಅಧಿಕಾರಿಗಳು ಹಾಗೂ ಪೊಲೀಸರು ಇದ್ದರು.



ಮಾನಸಿಕ ಆರೋಗ್ಯ ಅರಿವು ಕಾರ್ಯಾಗಾರದಲ್ಲಿ ಪೊಲೀಸರು, ವಕೀಲರು, ಅಧಿಕಾರಿಗಳು ಪಾಲ್ಗೊಂಡಿದ್ದರು

**ಮಾನಸಿಕ ರೋಗಕ್ಕೆ ದೊಡ್ಡ ಕಳಂಕ ಇದೆ. ಮನುಷ್ಯನೇ ಅಲ್ಲ ಎಂಬಂತೆ ಸಮಾಜ ನೋಡುತ್ತದೆ. ಈ ಕಳಂಕ ದೂರ ಮಾಡಬೇಕು. ಧೈರ್ಯದಿಂದ ಹೇಳಿಕೊಳ್ಳಬೇಕು. ಇಲ್ಲದಿದ್ದರೆ ಸಮಸ್ಯೆ ಬಗೆಹರಿಯಲ್ಲ**

**ಎನ್.ಕುಮಾರ್,** ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ



ಕೋಲಾರದಲ್ಲಿ ಶನಿವಾರ ನಡೆದ ಮಾನಸಿಕ ಆರೋಗ್ಯ ಅರಿವು ಕಾರ್ಯಾಗಾರದಲ್ಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್‌.ಕುಮಾರ್ ಮಾತನಾಡಿದರು. ಜಿಲ್ಲಾ ಪಂಚಾಯಿತಿ ಸಿಇಒ ಯುಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ ಇದ್ದಾರೆ

## 'ವಿಚ್ಛೇದನಕ್ಕೆ ಮಾನಸಿಕ ಸಮಸ್ಯೆ ಕಾರಣ'

'ಮಾನಸಿಕ ಕಾಯಿಲೆಗೆ ಲೈಂಗಿಕ ಸಮಸ್ಯೆಯೇ ಬಹುಮುಖ್ಯ ಕಾರಣವಾಗಿದೆ. ವಿಚ್ಛೇದನಕ್ಕೆ ಲೈಂಗಿಕ ಸಮಸ್ಯೆ ಜೊತೆಗೆ ಮಾನಸಿಕ ಸಮಸ್ಯೆಯೂ ಪ್ರಮುಖ ಕಾರಣವಾಗಿದೆ. ಅವಿದ್ಯಾವಂತರಿಗಿಂತ ವಿದ್ಯಾವಂತರಲ್ಲಿಯೇ ಇದು ಅಧಿಕ. ಲೈಂಗಿಕ ವಿಚಾರ ಬಹಳ ಮಡಿವಂತಿಕೆ, ಸಂಕೋಚದ ವಿಚಾರವಾಗಿದೆ. ಮುಕ್ತವಾಗಿ ಚರ್ಚಿಸುತ್ತಿಲ್ಲ. ಇದರಿಂದ ಹಲವಾರು ಸಮಸ್ಯೆಗಳು ಉಂಟಾಗುತ್ತಿವೆ' ಎಂದು ಎನ್.ಕುಮಾರ್ ಅಭಿಪ್ರಾಯಪಟ್ಟರು.